**CC. NO. 1158/2025**
**<u>ಪಿಡಬ್ಲ್ಯೂ:1</u>**

ದಿನಾಂಕಃ **13-05-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ. ಬಿ. ಎ. ವಕೀಲರಿಂದಃ</u>

1. ನಾನು ಹಾಜರುಪಡಿಸಿದ ಪಹಣಿ ಪತ್ರಿಕೆಗಳಲ್ಲಿ ಆರೋಪಿ ಹಾಗೂ ಆತನ ಕುಟುಂಬ ಸದಸ್ಯರ ಹೆಸರುಗಳು ನಮೂದು ಇದ್ದಾವೆ. ಆರೋಪಿಯ ಸದರಿ ಕುಟುಂಬ ಸದಸ್ಯರ ಹೆಸರುಗಳು ನನಗೆ ಗೊತ್ತಿಲ್ಲ. ಸದರಿ ಪಹಣಿಗಳಲ್ಲಿ ಜಮೀನು ಆರೋಪಿ ಹಾಗೂ ಮಲ್ಲಣ್ಣಗೌಡ, ಪ್ರಕಾಶಗೌಡ ಮತ್ತು ಪ್ರೇಮ್ಲಾಬಾಯಿರವರ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಜಮೀನುಗಳನ್ನು ಆರೋಪಿ ಈಗಾಗಲೆ ತಮ್ಮ ಕುಟುಂಬ ಸದಸ್ಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದ ಈಗಲೂ ಪಹಣಿಯಲ್ಲಿ ಆರೋಪಿಯ ಹೆಸರು ಇದೆ ಎಂದು ನುಡಿಯುತ್ತಾರೆ. ಆರೋಪಿ ತಮ್ಮ ಜಮೀನು ಮಾರಾಟ ಮಾಡಿದರೂ ಸಹ ಕುಟುಂಬಸ್ತರ ನಡುವಿನ ವ್ಯವಹಾರ ಇರುವುದರಿಂದ ಅವರು ಈವರೆಗೆ ಪಹಣಿಯಲ್ಲಿನ ಆರೋಪಿಯ ಹೆಸರನ್ನು ತೆಗೆಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಸದರಿ ಜಮೀನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ